**ಸಿ.ಸಿ ನಂ.768/17**

**ಪಿ.ಡಬ್ಲ್ಯೂ- 4**

**ದಿನಾಂಕಃ 31.07.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ.**

ಸದರಿ ದಿನ 2 ಗಂಟೆಗೆ ಕೇಂದ್ರ ಸ್ಥಾನ ಬಿಟ್ಟಿರುತ್ತೇನೆ. ಆರೋಪಿಯ ಮನೆಯ ಅಕ್ಕ ಪಕ್ಕ ಮನೆಗಳು ಇರುತ್ತವೆ ಎಂದರೆ ಸರಿ. ಸ್ಥಳದಲ್ಲಿ ಮದ್ಯಪಾನ ಮಾಡಲು ಬಂದಿದ್ದ ಆಸಾಮಿ ಗಳನ್ನು ಬಂಧಿಸಿರುವುದಿಲ್ಲ. ಮುದ್ದೆಮಾಲುಗಳು ಅಧೀಕೃತವಾಗಿ ಮಾರಾಟ ಮಾಡುವ ಪ್ಯಾಕೇಟಗಳಾಗಿರುತ್ತವೆ ಎಂದರೆ ಗೊತ್ತಿಲ್ಲ. ಸದರಿ ಮುದ್ದೆಮಾಲುಗಳ ಮೇಲೆ ತಯಾರಾಗುವ ಸ್ಥಳ, ದಿನಾಂಕ ಮತ್ತು ಕ್ರಮ ಸಂಖ್ಯೆ ಮತ್ತು ಎಲ್ಲಿಗೆ ಸರಬರಾಜು ಮಾಡಿರುತ್ತಾರೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸದರಿ ಮುದ್ದೆಮಾಲುಗಳನ್ನು ಎಲ್ಲಿಂದ ಖರೀದಿ ಮಾಡಿರುತ್ತಾರೆ ಎಂದು ವಿಚಾರಿಸಿರುವುದಿಲ್ಲ. ಎಲ್ಲಾ ಮುದ್ದೆಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುವುದಿಲ್ಲ. ಮುದ್ದೆಮಾಲುಗಳ ಮೇಲೆ ಪ್ರತ್ಯೇಕ ಗುರುತು ಮಾಡಿರುವುದಿಲ್ಲ. ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮತ್ತು ಉಳಿದ ಪೌಚ್ ಗಳನ್ನು ಪ್ರತ್ಯೇಕ ಮಾಡಿರುವುದಿಲ್ಲ. ಸದರಿ ದಿನ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಯಾವುದೇ ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**